ಕರ್ನಾಟಕ ವಿಧಾನ ಪರಿಷತ್

ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1786
ಉತ್ತರಿಸಬೇಕಾದ ದಿನಾಂಕ	:	24.03.2020.
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ಎಷ್ಟು? ತಾಲ್ಲೂಕುವಾರು ಮಾಹಿತಿ ನೀಡುವುದು	ಮಂಡ್ಯ ಜಿಲ್ಲೆಯಲ್ಲಿ ದಿನಾಂಕ 31–3–2019ರ ಅಂತ್ಯಕ್ಕೆ ಇದ್ದಂತೆ ಒಟ್ಟು 2077 ವಿವಿಧ ವರ್ಗದ ಸಹಕಾರ ಸಂಘಗಳಿರುತ್ತವೆ. ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ತಾಲ್ಲೂಕು	ಸಹಕಾರ ಸಂಘಗಳ ಸಂಖ್ಯೆ		
		ಕಾರ್ಯನಿರತ	ಸಮಾಪನೆ	ಒಟ್ಟು
1	ಮಂಡ್ಯ	450	23	473
2	ಮದ್ದೂರು	338	10	348
3	ಮಳವಳ್ಳಿ	267	7	274
4	ಶ್ರೀರಂಗಪಟ್ಟಣ	128	1	129
5	ಪಾಂಡವಪುರ	219	3	222
6	ಕೆ.ಆರ್.ಪೇಟೆ	328	5	333
7	ನಾಗಮಂಗಲ	294	4	298
	ಒಟ್ಟು	2024	53	2077

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಆ)	ಮಂಡ್ಯ ಜಿಲ್ಲೆಯಲ್ಲಿನ ಎಷ್ಟು ಸಹಕಾರ ಸಂಘಗಳಲ್ಲಿ ವಾರ್ಷಿಕ ಲೆಕ್ಕ ತಪಾಸಣೆ ಮಾಡಲಾಗಿದೆ ಮತ್ತು ಎಷ್ಟು ಬಾಕಿಯಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ ದಿನಾಂಕ: 31–03–2019 ರ ಅಂತ್ಯಕ್ಕೆ 1662 ಸಹಕಾರ ಸಂಘಗಳ ವಾರ್ಷಿಕ ಲೆಕ್ಕ ತಪಾಸಣೆ ಮಾಡಲಾಗಿದೆ. 415 ಸಹಕಾರ ಸಂಘಗಳ ಲೆಕ್ಕ ತಪಾಸಣೆ ಮಾಡಲು ಬಾಕಿ ಉಳಿದಿರುತ್ತವೆ. ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಜಿಲ್ಲೆ ಹೆಸರು	ಒಟ್ಟು ಸಹಕಾರ ಸಂಘಗಳು	ಲೆಕ್ಕಪರಿಶೋಧನೆ ಮಾಡಲಾಗಿರುವ ಸಹಕಾರ ಸಂಘಗಳ ಸಂಖ್ಯೆ	ಲೆಕ್ಕಪರಿಶೋಧನೆಯಾಗದೆ ಬಾಕಿ ಉಳಿದಿರುವ ಸಹಕಾರ ಸಂಘಗಳ ಸಂಖ್ಯೆ
1	ಮಂಡ್ಯ	473	366	107
2	ಮದ್ದೂರು	348	273	75
3	ಮಳವಳ್ಳಿ	274	197	77
4	ಶ್ರೀರಂಗಪಟ್ಟಣ	129	116	13
5	ಪಾಂಡವಪುರ	222	178	44
6	ಕೆ.ಆರ್.ಪೇಟೆ	333	275	58
7	ನಾಗಮಂಗಲ	298	257	41
	ಒಟ್ಟು	2077	1662	415

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಇ)	ವಾರ್ಷಿಕ ಲೆಕ್ಕ ತಪಾಸಣೆ ಮಾಡಿಸದ ಸಹಕಾರ ಸಂಘಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)	ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪರಿಶೋಧನೆಯನ್ನು ಆ ಸಂಘದ ಆಡಳಿತ ಮಂಡಳಿಯು, ಆರ್ಥಿಕ ವರ್ಷ ಮುಗಿದ ನಂತರ ಸೆಪ್ಟೆಂಬರ್–01 ನೇ ತಾರೀಖಿನೊಳಗೆ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63 ರಂತೆ ಪೂರ್ಣಗೊಳಿಸಿಕೊಳ್ಳುವುದು ಜವಾಬ್ದಾರಿಯಾಗಿರುತ್ತದೆ. ಅಲ್ಲದೆ ಲೆಕ್ಕಪರಿಶೋಧನೆಗೆ ಅಗತ್ಯವಿರುವ ಮಾಹಿತಿ ಮತ್ತು ಲೆಕ್ಕ ಪುಸ್ತಕಗಳನ್ನು ಒದಗಿಸುವ ಜವಾಬ್ದಾರಿಯು ಸಹ ಆಡಳಿತ ಮಂಡಳಿಯದೇ ಆಗಿರುತ್ತದೆ. ಆ ಪ್ರಕಾರವಾಗಿ ಲೆಕ್ಕಪರಿಶೋಧನೆ ಮಾಡಿಸದ ಆಡಳಿತ ಮಂಡಳಿಯ ವಿರುದ್ಧ ಕ್ರಮಕೈಗೊಳ್ಳಲು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 29ಸಿ (8)ರ ರೀತ್ಯಾ ಕ್ರಮಕೈಗೊಳ್ಳಲು ಅವಕಾಶಗಳಿವೆ. ಈ ಕುರಿತು ಸಂಬಂದಿಸಿದವರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಈ)	ವಾರ್ಷಿಕ ಲೆಕ್ಕ ತಪಾಸಣೆಯಲ್ಲಿನ ನ್ಯೂನತೆಗಳಿಗೆ ಅನುಪಾಲನಾ ವರದಿ ಸಲ್ಲಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; **(ಮಾಹಿತಿ ನೀಡುವುದು)**	ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ನ್ಯೂನತೆಗಳ ಸಂಬಂಧ ಕ್ರಮಕೈಗೊಂಡು ನ್ಯೂನತೆಗಳನ್ನು ಸರಿಪಡಿಸುವ ಜವಾಬ್ದಾರಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(10) ರ ರೀತ್ಯಾ ಆಡಳಿತ ಮಂಡಳಿಯದೇ ಆಗಿರುತ್ತದೆ. ಆ ರೀತಿಯಾಗಿ ನ್ಯೂನತೆಗಳನ್ನು ಸರಿಪಡಿಸಿದ ಬಗ್ಗೆ ವರದಿಯನ್ನು ನಿಬಂಧಕರು ಮತ್ತು ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸಲ್ಲಿಸಬೇಕಿರುತ್ತದೆ. ಪ್ರಸ್ತುತ ಸಂಘಗಳು ಅವರುಗಳ ವಾರ್ಷಿಕ ಮಹಾ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿಗಳ ಮೇಲೆ ಕೈಗೊಂಡ ನಿರ್ಣಯಗಳನ್ನು ಮಹಾಸಭೆಯ ನಡವಳಿಗಳೊಂದಿಗೆ ಸಲ್ಲಿಸುತ್ತಿದ್ದಾರೆ. ಅನುಪಾಲನಾ ವರದಿಯನ್ನು ಸಲ್ಲಿಸದೇ ಇರುವ ಸಹಕಾರ ಸಂಘಗಳ ಮೇಲೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಸಿಒ 31 ಸಿಎಲ್ಎಂ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು